# ಬಂದನೇನೆ ರಂಗ ಬಂದನೇನೆ ಎನ್ನ ತಂದೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 384.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 122.
3. **Ref.:** Shri Purandara Dasara Sahitya Part – 4, Krishna Leela, edited by Shri Betageri Krishna Sharma and Shri Bengeri Huchhu Rayaru, page No. 45.
4. **Ref.:** Lyrics mentioned without highlights are as per Ref. 1. The wordings in Ref. 2 are similar to Ref. 1. The wordings in Ref. 3 are slightly different and these differences are given in yellow highlights.
5. **Note:** Singer has followed lyrics as in Ref. 1.

ರಾಗ: ಶ್ರೀ                    ತಾಳ: ಆದಿ

ಬಂದನೇನೆ ರಂಗ ಬಂದನೇನೆ ಎನ್ನ || ಪ ||
ತಂದೆ ಬಾಲಕೃಷ್ಣ ನವನೀತ ಚೋರ || ಅಪ ||

ಘಿಲು ಘಿಲು ಘಿಲುರೆಂಬ ಪೊನ್ನಂದುಗೆ ಗೆಜ್ಜೆ
ಹೊಳೆ ಹೊಳೆ ಹೊಳೆಯುವ ಪಾದವನೂರುತ
ನಲಿ ನಲಿ ನಲಿದಾಡುವ ಉಂಗುರ ಅರಳೆಲೆ
ಥಳ ಥಳ ಥಳ ಹೊಳೆಯುತ ಶ್ರೀ ಕೃಷ್ಣ || 1 ||

ಕಿಣಿ ಕಿಣಿ ಕಿಣಿರೆಂಬ ಕರದ ಕಂಕಣ ಬಳೆ
ಝುಣ ಝುಣ ಝುಣರೆಂಬ ನಡುವಿನ ಘಂಟೆ
(ಗಣ ಗಣ ಗಣಯೆಂಬ) (ಢಣ ಢಣ ಢಣರೆಂಬ) ಪಾದದ ತೊಡವಿನ
(ಕುಣಿ ಕುಣಿ ಕುಣಿ) (ಮಿಣಿ ಮಿಣಿ) ಕುಣಿದಾಡುತ ಶ್ರೀ ಕೃಷ್ಣ || 2 ||

ಹಿಡಿ ಹಿಡಿ ಹಿಡಿಯೆಂದು ಪುರಂದರ ವಿಠಲನ
ದುಡು ದುಡು ದುಡು ದುಡನೆ ಓಡುತ
ನಡೆ ನಡೆ ನಡೆಯೆಂದು ಮೆಲ್ಲನೆ ಪಿಡಿಯಲು

ಬಿಡಿ ಬಿಡಿ ಬಿಡಿ ದಮ್ಮಯ್ಯ ಎನ್ನುತ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಗೋಪ ಸ್ತ್ರೀಯೊಬ್ಬಳು ಶ್ರೀ ಕೃಷ್ಣನು ಬಂದುದನ್ನು ಕಂಡು ಸಂಭ್ರಮದಿಂದ ಆಡಿದ ಮಾತುಗಳನ್ನು ಈ ಹಾಡು ಒಳಗೊಂಡಿದೆ.

**ನಡುವಿನ ಗಂಟೆ** = ನಡುವಿನ ಪಟ್ಟಿಗೆ ಕಟ್ಟಿದ ಚಿಕ್ಕ ಗಂಟೆಗಳು

**ಪೊನ್ನಂದಿಗೆ** – ಬಂಗಾರದ ಕಾಲುಗಡಗ.

**ಕಂಕಣ** – ಕೈಬಳೆ.

**ತೊಡವಿನ** – ತೊಡವು; ಒಡವೆ.

**Classification:** Keerthane
**Ankita:** purandara vittala
**Location:** NA
**Category:** Krishna Leele, Navaratna Malike
**Sub-Category:** ranga, Krishna, benne, Balakrishna, tande,
**Pravachana:** NA
**Explanation:** NA